ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ಮಾಡಬೇಕೆಂದು ಈ ಸದನದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಒಂದು ಮಸೂದೆಯನ್ನು ಮಂಡಿಸಿರತಕ್ಕಂಥದು ನೀಜ. ಇದರಲ್ಲಿ ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಇರತಕ್ಕಂಥದು ಎಲ್ಲವೂ ಕೂಡ ಬದಲಾವಣೆ ಆಗಬಾರದೆಂದು ನಾವು ಹೇಳುವುದಿಲ್ಲ. ಇವತ್ತಿನ ದಿವಸ ಸಾಕಷ್ಟು ಬದಲಾವಣೆ ಆಗಬೇಕಾಗಿದೆ. ಇದರಲ್ಲಿ ರಾಜ್ಯಪಾಲರಿಗೆ ಇರತಕ್ಕಂಥ ಅಧಿಕಾರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡತಕ್ಕಂಥ ವಿಚಾರದಲ್ಲಿ ಮತ್ತು ಸಿಂಡಿಕೇಟ್ ಮತ್ತು ಸೆನೆಟ್ ಆಡಳಿತಕ್ಕೆ ಸರ್ಕಾರದವರು ನೇರವಾಗಿ ನಾಮಕರಣ ಮಾಡತಕ್ಕಂಥ ಈ ಎರಡು ವಿಷಯದ ಬಗ್ಗೆ ನಮ್ಮದು ವಿರೋಧ ಇದೆ. ಇದಕ್ಕೋಸ್ಕರ ಒಂದು ಜಂಟಿ ಸದನದ ಸಮಿತಿಯನ್ನು ಮಾಡಬೇಕೆಂದು ಮತ್ತು ಬೇರೆಯವರ ಅಬಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಆ ಕ್ಷೇತ್ರದಲ್ಲಿ ಕೆಲಸ ಮಾಡಿರತಕ್ಕಂಥ ಪರಿಣಿತ ಸದಸ್ಯರನ್ನು ಒಳಗೊಂಡಂಥ ದು ಸಮಿತಿ ಆಗಿತ್ತು. ಮಾನ್ಯ ಉನ್ನತ ಶಿಕ್ಷಣ ಸಚಿವರು ಸದರಿ ಕಮಿಟಿಯ ಅಧ್ಯಕ್ಷರಾಗಿದ್ದರು. ನಮ್ಮ ಕಡೆಯಿಂದ ಶ್ರೀ ಬಿ. ಸೋಮಶೇಖರ್ ಮತ್ತು ಶ್ರೀ ಕೆ.ಬಿ. ಮಲ್ಲಿಕಾರ್ಜುನ್ ಮತ್ತು ಬಿಜೆಪಿ ಕಡೆಯಿಂದ ಮಾನ್ಯ ಸುರೇಶ್ ಕುಮಾರ್ ಮಾನ್ಯ ರಾಮದಾಸ್‌ರವರು ವಿಧಾನ ಪರಿಷತ್ತಿನ ಮಾನ್ಯ ಬಸವರಾಜ ಹೊರಟಿಯವರು ಈ ಸಮಿತಿಯ ಸದಸಯ್ರಾಗಿ ಕೆಲಸ ಮಾಡಿದ್ದಾರೆ. ಕೇವಲ ವಿರೋದಪಕ್ಷದ ನಾಯಕರೇ ಅಷ್ಟೇ ಅಲ್ಲದೆ ಶಿಕ್ಷಣ ಕ್ಷೇತ್ರದಲ್ಲಿರತಕ್ಕಂಥ ಅನೇಕ ತಜ್ಞರೂ ಸಹಿತ ಇದನ್ನು ವಿರೋಧ ಮಾಡುತ್ತಾ ಇದರಿಂದ ಶೈಕ್ಷಣಿಕ ವಾತಾವರಣಕ್ಕೆ ಧಕ್ಕೆ ಬರುತ್ತದೆ. ಆದ್ದರಿಂದ ಸದರಿ ತಿದ್ದುಪಡಿಯನ್ನು ಕೈಬಿಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ತಿಳಿಸಿದ್ದಾರೆ. ಸದನ ನೇಮಕ ಮಾಡಿದ್ದಂಥ ಜಂಟಿ ಸಮಿತಿ ಪೂರ್ಣ ಪ್ರಮಾಣದಲ್ಲಿ ಜಂಟಿ ಸಮಿತಿ ಆಗಿಲ್ಲ. ಏಕೆಂದರೆ ಪ್ರತಿಪಕ್ಷದವರೆಲ್ಲೂ ರಾಜೀನಾಮೆ ಕೊಟ್ಟಿರುವುದರಿಂದ ಇದು ಕೇವಲ ಆಡಳಿತ ಪಕ್ಷದಲ್ಲಿರತಕ್ಕಂಥ ಸಮಿತಿಯಾಗಿದೆ. ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ಬಿಲ್ಲನ್ನು ಮಂಡನೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಬಿಲ್ ಮಂಡನೆ ಮಾಡಲಿಕ್ಕೆ ನಾವು ಪ್ರತಿಭಟಿಸುತ್ತೇವೆಂದು ತೋರಿಸಬೇಕಲ್ಲವೇ? ಸರ್ಕಾರ, ಶಿಕ್ಷಣ ಕ್ಷೇತ್ರವನ್ನು xxx ಹೊರಟಿದೆ. ಆದ್ದರಿಂದ ಇದನ್ನು ವಿರೋಧ ಮಾಡುತ್ತಾ ಸದರಿ ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳ-ಯು ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

---

xxx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.